**ದಿನಾಂಕಃ 02.07.2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಕೆ.ಯು. ವಕೀಲರಿಂದಃ**

ನಾನು 2008 ರಿಂದ ಇಲ್ಲಿಯವರೆಗೂ ಪತ್ರ ಬರಹಗಾರರ ಸಹಾಯಕರಾಗಿ ಕೆಲಸ ಮಾಡುತ್ತಿರುತ್ತೇನೆ. ನನಗೆ ವಾದಿ 2008 ರಿಂದ ಪರಿಚಯ ಇರುತ್ತಾರೆ. ಗಫರ್ ಬೇಗ್ ರವರ ಕುಟುಂಬದ ವ್ಯವಹಾರದ ಬಗ್ಗೆ ಗೊತ್ತಿಲ್ಲ. ನಿಪಿ.12 ರ ವಾದಿ ಖರೀದಿ ಮಾಡಿರುತ್ತಾರೆ. ನಿಪಿ.12 ರ 2 ನೇ ಪಕ್ಷಗಾರರ ಹೆಸರು ಬೇರೆ ಅಕ್ಷರ ಇರುವ ಬಗ್ಗೆ ಗೊತ್ತಿಲ್ಲ. ಗಫರ್ ಬೇಗ್ ವಯಸ್ಸು ಗೊತ್ತಿಲ್ಲ. ನನಗೆ ನಿಪಿ.12 ರ ದಾಖಲಾತಿಯ ಮೊದಲಿನ ವ್ಯವಹಾರ ಗೊತ್ತಿಲ್ಲ. ನಿಪಿ.12 ರ ಸ್ಟ್ಯಾಂಪ್ ಪತ್ರವನ್ನು ಮಧ್ಯಾಹ್ನ ತಂದಿರುತ್ತಾರೆ. ನಿಪಿ.12 ಪತ್ರವನ್ನು ವಾದಿ ತಂದುಕೊಟ್ಟಿದ್ದನ್ನು ತಯಾರು ಮಾಡಿರುತ್ತೇವೆ. ನಿಪಿ.12 ಪತ್ರವನ್ನು ತಯಾರು ಮಾಡಿದ ಸಮಯ ಗೊತ್ತಿಲ್ಲ. ವಾದಿ ಮತ್ತು ಗಫರ್ ಬೇಗ್ ಬಂದಿರುತ್ತಾರೆ ಜೊತೆಗೆ ಶ್ರೀ ಈರಣ್ಣ ವಕೀಲರು ಸಹ ಬಂದಿರುತ್ತಾರೆ. ವಾದಿ ದಾಖಲೆಗಳು ಏನು ತಂದಿರುತ್ತಾರೆ ಎಂದು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವ್ಯವಹಾರ ಆಗಿಲ್ಲ. ನಿಪಿ12 ರ ಪತ್ರವನ್ನು ಯಾರು ಬೆರಳಚ್ಚು ಮಾಡುವಾಗ ನಾನು ಇರಲಿಲ್ಲ. ನಿಪಿ.12 ಕ್ಕೆ ಮೊದಲು ಗಫರ್ ಬೇಗ್, ನಾನು, ವಕೀಲರಾದ ಶ್ರೀ.ಈರಣ್ಣ ರವರು ಸಹಿ ಮಾಡಿರುತ್ತಾರೆ ನಂತರ ನಾನು ಹೊರೆಟು ಹೋಗಿರುತ್ತೇನೆ. ನಾನು ಹೇಳಿದಂತೆ ಗಫರ್ ಬೇಗ್ ಬಂದಿಲ್ಲ ಮತ್ತು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು, ವಾದಿ ಮತ್ತು ನಾಗೇಂದ್ರ ರವರು ಸೇರಿ ನಿಪಿ.12 ನ್ನು ಜೊತೆಗೆ ಗಫರ್ ಬೇಗ್ ರವರ ಸಹಿಯನ್ನು ನಕಲು ಮಾಡಿ ಹಣ ಗಳಿಸಲು ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

OS.112/20104 PW-2

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹೆಚ್ಚುವರಿ ಹಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ಶಿರಾ.